# ಸಾಹಿತ್ಯ ಕೃತಿ, ಮೂಲ ಲೇಖಕರ ಮಾಹಿತಿ ಸಂಗ್ರಹ



ರಮೇಶ್

**ಮಡಿಕೇರಿ:** ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಐದು ವಿನೂತನ ಯೋಜನೆ ಹಮ್ಮಿಕೊಂಡಿದ್ದು, ಬಂಗಾರದ ಎಲೆಗಳು ಯೋಜನೆಯಲ್ಲಿ 1920 ರಿಂದ 2020ರವರೆಗಿನ ಒಂದು ಶತಮಾನದ ಅವಧಿಯಲ್ಲಿ ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಕಟವಾದ ಸಾಹಿತ್ಯ ಕೃತಿಗಳನ್ನು ಮತ್ತು ಅದರ ಮೂಲ ಲೇಖಕರ ಮಾಹಿತಿಯನ್ನು ದಾಖಲಿಸುವ ಮಹತ್ವದ ಕಾರ್ಯ ನಡೆಯಲಿದೆ ಎಂದು ಯೋಜನೆಯ ಕ್ಷೇತ್ರ ತಜ್ಞ ಟಿ.ಪಿ.ರಮೇಶ್ ತಿಳಿಸಿದರು.

ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿ, ಕೊಡಗು ಸೇರಿದಂತೆ ಮೈಸೂರು ವಿಭಾಗದ 8 ಜಿಲ್ಲೆಗಳಿಗೆ ಅನ್ವಯವಾಗುವಂತೆ ಒಂದು ಶತಮಾನದ ಅವಧಿಯಲ್ಲಿ ಆಯಾ ಜಿಲ್ಲೆಯ ಲೇಖಕರುಗಳು ಪ್ರಕಟಿಸಿದ ಪ್ರಮುಖ ಕೃತಿಗಳು, ಸ್ಮರಣೆ ಸಂಚಿಕೆಗಳು ಹಾಗೂ ವಿಶೇಷಾಂಕಗಳಲ್ಲಿ ಪ್ರಕಟಗೊಂಡ ಲೇಖನ ದಾಖಲಿಸುವ ಕೆಲಸ ನಡೆಯಲಿದೆ ಎಂದರು.

ಬಂಗಾರದ ಎಲೆಗಳು ಯೋಜನೆಯನ್ನು ಕಾರ್ಯಗತಗೊಳಿಸಲು ರಾಜ್ಯದ 30 ಜಿಲ್ಲೆಗಳಿಗೂ ಕ್ಷೇತ್ರ ತಜ್ಞರುಗಳನ್ನು ಅಕಾಡೆಮಿ ನೇಮಿಸಿದೆ.

ಕಳೆದ ಡಿ.7 ಮತ್ತು 8 ರಂದು ಬೆಂಗಳೂರಿನ ಕನ್ನಡ ಭವನದಲ್ಲಿ ಕ್ಷೇತ್ರ ತಜ್ಞರ ಸಮಾಲೋಚನಾ ಸಭೆ ಮತ್ತು ಕಾರ್ಯಾಗಾರದಲ್ಲಿ ಯೋಜನೆಯ ಜಾರಿಯ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ 1920ರಿಂದ ಇಲ್ಲಿಯವರೆಗೆ ಪ್ರಕಟವಾಗಿರುವ ಸಾಹಿತ್ಯ ಕೃತಿಗಳನ್ನು ಅವುಗಳ ಲೇಖಕರ ವಿವರಗಳೊಂದಿಗೆ ದಾಖಲಿಸುವ ಸಲುವಾಗಿ ಜಿಲ್ಲೆಯ ಲೇಖಕರುಗಳು ತಮ್ಮ ಪ್ರಕಟಿತ ಕೃತಿಗಳನ್ನು ಟಿ.ಪಿ. ರಮೇಶ್, ಕ್ಷೇತ್ರ ತಜ್ಞ, ಬಂಗಾರದ ಎಲೆಗಳು, ನಂ.8, ನಿರ್ಮಲ ನಿಲಯ, ಸಮತ ಜೋಸೆಫರ ಕಾನ್ವೆಂಟ್ ಬಳಿ, ಮಡಿಕೇರಿ–571201 ಇಲ್ಲಿಗೆ ಕಳುಹಿಸಿಕೊಡುವಂತೆ ತಿಳಿದರು.

### ಐದು ಯೋಜನೆಗಳು

ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ಬಂಗಾರದ ಎಲೆಗಳು, ಚಕೋರ ಯೋಜನೆ, ಯುವ ಕಾವ್ಯಾಭಿಯಾನ ಯೋಜನೆ ಒಳಗೊಂಡಂತೆ ವಜ್ರದ ಬೇರುಗಳು ಯೋಜನೆಯ ಕನ್ನಡ ಸಾಹಿತ್ಯ ಪ್ರಕಾರಗಳ ಮಾಲಿಕೆ, ದಲಿತ ಕ್ರೈಸ್ತ ಸಾಂಸ್ಕೃತಿಕ ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಎಂದು ಟಿ.ಪಿ.ರಮೇಶ್ ತಿಳಿಸಿದರು.

# ಪ್ರಬುದ್ಧ ಭಾರತದ ಕನಸು ನಮ್ಮದು: ವಿಜಯ



ಎಐಎಂಬಿಎಸ್‌ಸಿಎಸ್‌ನ ರಾಷ್ಟ್ರೀಯ ಸಂಘಟಕ ಮತ್ತು ಅಂಬೇಡ್ಕರ್ ತತ್ವ ಪ್ರತಿಪಾದಕ ವಿಜಯ ಮಾನ್ಕಾರ್ ಕುಕ್ಕೇಡಿಯಲ್ಲಿ ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಿ ಗೌರವ ಸಲ್ಲಿಸಿದರು.

**ವಿಶ್ವವಾಣಿ ಸುದ್ದಿಮನೆ** ಬೆಳ್ತಂಗಡಿ

ಕರ್ನಾಟಕದ ವಿಧಾನಸಭೆ ಚುನಾವಣೆಯಲ್ಲಿ ಆಲ್ ಇಂಡಿಯಾ ಮೂಲನಿವಾಸಿ ಬಹುಜನ ಸಮಾಜ ಸೆಂಟ್ರಲ್ ಸಂಘವು ಶೇ. 10 ರಷ್ಟು ಸ್ಥಾನಗಳಲ್ಲಿ ಸ್ಪರ್ಧಿಸಲಿದೆ ಎಂದು ಸೆಂಟ್ರಲ್ ಸಂಘದ ರಾಷ್ಟ್ರೀಯ ಸಂಘಟಕ ವಿಜಯ ಮಾನ್ಕಾರ್ ಹೇಳಿದರು.

ಕುಕ್ಕೇಡಿ ಅಂಬೇಡ್ಕರ್ ಭವನದಲ್ಲಿ ಸಂಘದ ದಕ್ಷಿಣ ಕರ್ನಾಟಕ ಸಮಾವೇಶದಲ್ಲಿ ಭಾಗವಹಿಸಲು ಬಂದ ಸಂದರ್ಭ ಮಾಧ್ಯಮದವರೊಂದಿಗೆ ಮಾತನಾಡಿದರು.

ಪ್ರಬುದ್ಧ ಭಾರತದ ಕನಸು ನಮ್ಮದು. ಆ ಮೂಲಕ ವಿಶ್ವವನ್ನು ಪ್ರಬುದ್ಧಗೊಳಿಸುವ ಉದ್ದೇಶದಿಂದ ಆದರ್ಶವನ್ನೊಂದನ್ನು ಇಟ್ಟುಕೊಂಡು ದೇಶ ಕಟ್ಟುವ ರಾಷ್ಟ್ರೀಯ ಚಳವಳಿ ಹಾಗೂ ಸಂಘಟನೆಯ ರೂಪದಲ್ಲಿ ಸೆಂಟ್ರಲ್ ಸಂಘ ಕಾರ್ಯಾಚರಿಸುತ್ತಿದೆ. ಮೂಲ ನಿವಾಸಿ ಬಹುಜನ ಸಮಾಜವನ್ನು ಅಂಬೇಡ್ಕರ್ ಧ್ಯೇಯದೊಂದಿಗೆ ವಿಮೋಚನೆಯತ್ತ ಕೊಂಡೊಯ್ಯುವುದೇ ನಮ್ಮ ಏಕೈಕ ಸಂಕಲ್ಪವಾಗಿದೆ ಎಂದರು.

ಪ್ರಬುದ್ಧ ಭಾರತ ಸಂಘ ಕರ್ನಾಟಕ ಇದರ ಕೋಶಾಧಿಕಾರಿ ಕೇಶವ ಪಿಲ್ಯ, ಉಪಾಧ್ಯಕ್ಷ ಶೇಖರ್ ಕುಕ್ಕೇಡಿ ಇದ್ದರು.

# ವಿದ್ಯುತ್ ತಂತಿ ತುಳಿದು ವ್ಯಕ್ತಿ ಸಾವು



ಕೃಷ್ಣೇಗೌಡ

**ಪಾಂಡವಪುರ:** ತಾಲೂಕಿನ ಮಡಕೆಪಟ್ಟಣದ ಬಳಿ ಶನಿವಾರ ಸಂಜೆ ಮೇಕೆಗಳಿಗೆ ಸೊಪ್ಪು ತರಲು ಜಮೀನಿಗೆ ತೆರಳಿದ ವ್ಯಕ್ತಿಯೊಬ್ಬರು ವಿದ್ಯುತ್ ತಂತಿ ಸ್ಪರ್ಶವಾಗಿ ಮರದಿಂದ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ. ತಾಲೂಕಿನ ಚಿಕ್ಕಾಡೆ ಗ್ರಾಮದ ನಿವಾಸಿ ವೀರಭದ್ರೇಗೌಡರ ಪುತ್ರ ಕೃಷ್ಣೇಗೌಡ (30) ಎಂಬಾತ ಮೃತ ವ್ಯಕ್ತಿ.

ಪಾಂಡವಪುರ–ಮಂಡ್ಯ ಮುಖ್ಯ ರಸ್ತೆಯಲ್ಲಿ ಕೃಷ್ಣೇಗೌಡ ಶನಿವಾರ ಸಂಜೆ ಮರವೊಂದನ್ನು ಏರಿ ಸೊಪ್ಪು ಕಡಿಯುತ್ತಿದ್ದಾಗ 11 ಕೆವಿ ಸಾಮರ್ಥ್ಯದ ವಿದ್ಯುತ್ ತಂತಿ ತಗುಲಿ ಕೆಳ ಬಿದ್ದು ಸಾವನ್ನಪ್ಪಿದ್ದಾನೆ. ಬಳಿಕ ಮಾರನೆಯ ದಿನ ಬೆಳಗ್ಗೆ ರೈತರು ಜಮೀನಿಗೆ ತೆರಳಿದಾಗ ಕೃಷ್ಣೇಗೌಡ ಸಾವನ್ನಪ್ಪಿರುವ ವಿಷಯ ತಿಳಿದು ಆತನ ಸಂಬಂಧಿಕರಿಗೆ ವಿಷಯ ಮುಟ್ಟಿಸಿದ್ದಾರೆ ಎನ್ನಲಾಗಿದೆ.

ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿರುವ ಪಾಂಡವಪುರ ಪೊಲೀಸರು ಮುಂದಿನ ಕ್ರಮ ಕೈಗೊಂಡಿದ್ದಾರೆ.

# ವಿದ್ಯಾರ್ಥಿಗಳು ಪಠ್ಯೇತರ ಚಟುವಟಿಕೆಲ್ಲೂ ಪಾಲ್ಗೊಳ್ಳಲಿ



ಕ್ರೀಡಾಚಟುವಟಿಕೆಗಳ ಸಮಾರೋಪದಲ್ಲಿ ಸಹಕಾರ ರತ್ನ ಪ್ರಶಸ್ತಿ ಪಡೆದ ಚಂದೂಪುರ ಪಾಪಣ್ಣ ಸನ್ಮಾನಿಸಿ ಗೌರವಿಸಿದರು.

**ಭಾರತೀನಗರ:** ವಿದ್ಯಾರ್ಥಿಗಳು ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಬೇಕು ಎಂದು ಸಹಕಾರ ರತ್ನ ಪ್ರಶಸ್ತಿ ಪುರಸ್ಕೃತ , ಮಾಜಿ ಜಿ.ಪಂ ಸದಸ್ಯ ಚಂದೂಪುರ ಪಾಪಣ್ಣ ತಿಳಿಸಿದರು.

ಚಂದೂಪುರ ಸರಕಾರಿ ಪದವಿ ಪೂರ್ವಕಾಲೇಜಿನಲ್ಲಿ ನಡೆದ ಕ್ರೀಡಾಚಟುವಟಿಕೆಗಳ ಸಮಾರೋಪದಲ್ಲಿ ಮಾತನಾಡಿದರು.

ವಿದ್ಯಾರ್ಥಿಗಳು ಪ್ರಸ್ತುತ ದಿನದಲ್ಲಿ ಪಠ್ಯದ ಜತೆಗೆ ಪಠ್ಯೇತರ ಚಟುವಟಿಕೆಗಳಲ್ಲೂ ಭಾಗವಹಿಸಿ ತಮ್ಮ ಪ್ರತಿಭೆಗಳನ್ನು ಹೊರತರಬೇಕು ಎಂದು ಹೇಳಿದರು.

ವಿದ್ಯೆ ಇಲ್ಲದವರಿಗೆ ಸಮಾಜದಲ್ಲಿ ಗೌರವ ಇರುವುದಿಲ್ಲ, ಆದ್ದರಿಂದ ಎಲ್ಲರು ವಿದ್ಯಾವಂತರಾಗಿ ದೇಶಕ್ಕೆ ಗೌರವಂತರಬೇಕು ಎಂದರು. ಹೆಣ್ಣು ಮಕ್ಕಳು ವಿದ್ಯಾಭ್ಯಾಸವನ್ನು ಸ್ಥಗಿತಗೊಳಿಸದೇ ಉನ್ನತ ಶಿಕ್ಷಣದಲ್ಲಿ ತೊಡಗಬೇಕು ಎಂದರು.

ಯುವ ಶಕ್ತಿ ದೇಶದ ಶಕ್ತಿಯಾಗಿರುವುದರಿಂದ ಯುವಕರು ಅನೇಕ ರಚನಾತ್ಮಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ರಾಷ್ಟ್ರದ ಅಭಿವೃದ್ಧಿಗೆ ಶ್ರಮಿಸಲು ಮುಂದಾಗಬೇಕು. ಸರಕಾರದಿಂದ ನೀಡುತ್ತಿರುವ ಸೌಲಭ್ಯಗಳನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಪ್ರಾಂಶುಪಾಲ್ ಕೃಷ್ಣೇಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ, ಪಾಪಣ್ಣನವರ ಪರಿಶ್ರಮದಿಂದ ಸಹಕಾರ ರತ್ನ ಲಭಿಸಿದೆ. ಹಾಗೆಯೇ ವಿದ್ಯಾರ್ಥಿಗಳು ಶ್ರಮವಹಿಸಿ ಓದಿದರೆ ಮಾತ್ರ ಸಾರ್ಥಕತೆಯ ಜೀವನ ನಡೆಸಲು ಸಾಧ್ಯ. ಸ್ಪರ್ಧಾತ್ಮಕ ಯುಗದಲ್ಲಿ ಉದ್ಯೋಗಕ್ಕಾಗಿ ಪೈಪೋಟಿ ಹೆಚ್ಚಾಗಿದ್ದು, ವಿದ್ಯಾರ್ಥಿಗಳು ಏಕಾಗ್ರಸ್ಥರಾಗಿ ವ್ಯಾಸಂಗ ಮಾಡಬೇಕೆಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಉಪನ್ಯಾಸಕರಾದ ಕೆ.ವಿ.ಶ್ರೀನಿವಾಸ್‌ಕುಮಾರ್, ಜಿ.ಕೆ.ಕೃಷ್ಣಪ್ಪ, ಸಿ.ಜೆ. ಕುಮಾರ್, ಗಣೇಶ್‌ರಾವ್, ವೆಂಕಟೇಶ್, ಮಹದೇವಸ್ವಾಮಿ, ದೈಹಿಕ ಶಿಕ್ಷಣ ಶಿಕ್ಷಕ ಕುಮಾರ್ ಇದ್ದರು.

# ಅಲೆಮಾರಿಗಳಿಗೆ ಸೌಕರ್ಯ ಕಲ್ಪಿಸುವುದು ಜನಪ್ರತಿನಿಧಿಗಳ ಕರ್ತವ್ಯ

**ವಿಶ್ವವಾಣಿ ಸುದ್ದಿಮನೆ** ಪಾಂಡವಪುರ



ಶಿಕಾರಿಪುರದ ಬಳಿಯ ಬಸ್ ನಿಲ್ದಾಣಕ್ಕೆ ವಿಧಾನ ಪರಿಷತ್ ಸದಸ್ಯ ಡಿ.ಎಸ್.ವೀರಯ್ಯ ಭೂಮಿ ಪೂಜೆ ನೆರವೇರಿಸಿದರು.

ಶಿಕಾರಿಪುರ ಗ್ರಾಮದಲ್ಲಿರುವ ಅಲೆಮಾರಿ ಜನಾಂಗಕ್ಕೆ ಬೇಕಾಗಿರುವ ಮೂಲ ಸೌಕರ್ಯ ಕಲ್ಪಿಸುವುದು ಜನಪ್ರತಿನಿಧಿಗಳ ಆದ್ಯ ಕರ್ತವ್ಯ ಎಂದು ಬಿಜೆಪಿ ದಲಿತ ಮೋರ್ಚಾ ಅಧ್ಯಕ್ಷ ಹಾಗೂ ವಿಧಾನ ಪರಿಷತ್ ಸದಸ್ಯ ಡಿ.ಎಸ್. ವೀರಯ್ಯ ಹೇಳಿದರು.

ಶಿಕಾರಿಪುರ ಗ್ರಾಮದ ಬಳಿ ತಮ್ಮ ವಿಧಾನ ಪರಿಷತ್ ಸದಸ್ಯರ ಅನುದಾನದಲ್ಲಿ ನಿರ್ಮಿಸುತ್ತಿರುವ ಬಸ್ ನಿಲ್ದಾಣದ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದರು. ಈ ಅಲೆಮಾರಿ ಜನಾಂಗಗಳ ಬಗ್ಗೆ ಅತಿ ಹೆಚ್ಚು ಕಾಳಜಿ ಹೊಂದಿದ್ದರು. ದಿವಂಗತ ಹೊನ್ನಯ್ಯನವರ ಬಳಿಕ ನಾನು ಆ ಕರ್ತವ್ಯಗಳನ್ನು ನಿಭಾಯಿಬೇಕಾಗಿದೆ ಈ ಹಿನ್ನೆಲೆಯಲ್ಲಿ ಗ್ರಾಮದ ಪ್ರಮುಖರ ಜತೆ ಎರಡು ಬಾರಿ ಸಭೆ ನಡೆಸಿ ಅಗತ್ಯ ಮೂಲ ಸೌಕರ್ಯಗಳ ಕೊರತೆ ನಿವಾರಣೆಗೆ ಚರ್ಚಿಸಲಾಗಿದೆ ಎಂದರು.

ಇಲ್ಲಿನ ಕೆಲವರಿಗೆ ಪಡಿತರ ಚೀಟಿ ಇಲ್ಲ, ಮತದಾರರ ಪಟ್ಟಿಗೆ ಹೆಸರು ಸೇರ್ಪಡೆಯಾಗಿಲ್ಲ, ಕುಡಿಯುವ ನೀರಿನ ವ್ಯವಸ್ಥೆ ಸಮಸ್ಯೆ ಇದೆ ಹೀಗೆ ಹಲವಾರು ಮೂಲ ಸೌಕರ್ಯಗಳ ಕೊರತೆ ಇದ್ದು ಈ ಬಗ್ಗೆ ಮಾಹಿತಿ ಪಡೆಯಲಾಗಿದೆ ಆದಷ್ಟು ಬೇಗ ಎಲ್ಲಾ ಸಮಸ್ಯೆಗಳ ನಿವಾರಣೆಗೆ ಕ್ರಮ ವಹಿಸಲಾಗುವುದು ಎಂದು ಹೇಳಿದರು. ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಮಾತನಾಡಿ, ಸರಕಾರ ಬಡವರಿಗೆ ಎಟಿಎಲ್ (ಎನಿ ಟೈಂ ಲೋನ್) ಕಾರ್ಡ್‌ಗಳನ್ನು ವಿತರಿಸಬೇಕು. ಈ ಕಾರ್ಡ್‌ಗಳ ಮುಖಾಂತರ ಬಡವರು ಎರಡು ಲಕ್ಷ ರು.ವರೆಗೆ ಸಾಲ ಪಡೆದು ತಮ್ಮ ಕುಟುಂಬದ ಆರ್ಥಿಕ ಸ್ಥಿರತೆ ಕಾಪಾಡಿಕೊಂಡು ನಂತರ ಹಂತ ಹಂತವಾಗಿ ಸಾಲ ಹಿಂದಿರುಗಿಸ ಬೇಕು ಇಂತಹ ಯೋಜನೆಗಳನ್ನು ಸರಕಾರ ರೂಪಿಸಿ ಬಡವರ ಕಲ್ಯಾಣ ಮಾಡಬೇಕು ಜತೆಗೆ ಆರೋಗ್ಯ ಕಾರ್ಡ್‌ಗಳನ್ನು ವಿತರಿಸಬೇಕು ಎಂದರು.

# ಮಾಂಸ ಮಾರಾಟ ನಿಷೇಧ

**ಚಿಕ್ಕಬಳ್ಳಾಪುರ:** ಸರಕಾರದ ಆದೇಶದಂತೆ ಫೆ. 13 ರಂದು ಮಹಾಶಿವರಾತ್ರಿ ದಿನ ಪ್ರಾಣಿ ವಧೆ ಮತ್ತು ಮಾಂಸ ಮಾರಾಟ ನಿಷೇಧದ ದಿನವೆಂದು ಘೋಷಿತವಾಗಿರುವುದರಿಂದ ಜಿಲ್ಲೆಯ ವ್ಯಾಪ್ತಿಯಲ್ಲಿ ಮಾಂಸ ಮಾರಾಟದ ಅಂಗಡಿ ಮುಚ್ಚಲು ಹಾಗೂ ಮಾಂಸ ಮಾರಾಟ ಮಾಡಲು ನಿಷೇಧಿಸಲಾಗಿದೆ. ತಪ್ಪಿದ್ದಲ್ಲಿ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದೆಂದು ನಗರಸಭೆ ಪೌರಾಯುಕ್ತರು ತಿಳಿಸಿದ್ದಾರೆ.

# ಮುದ್ದಿನ ತಂಗಿ ನಾಟಕ ಪ್ರದರ್ಶನ ಇಂದು

**ಶಿರಾ:** ಮಹಾಶಿವರಾತ್ರಿ ಹಬ್ಬದ ಅಂಗವಾಗಿ ಶಿರಾ ತಾಲೂಕಿನ ದೊಡ್ಡಹುಲಿಕುಂಟೆ ಗ್ರಾಮದಲ್ಲಿ ಫೆ.13ರ ರಾತ್ರಿ 8.ಗಂಟೆಗೆ ಶ್ರೀ ತಮ್ಮಣ್ಣ ತಾತ ನಾಟಕ ಮಂಡಳಿವತಿಯಿಂದ ಮುದ್ದಿನ ತಂಗಿ ಎಂಬ ಸಾಮಾಜಿಕ ನಾಟಕ ಪ್ರದರ್ಶನ ಏರ್ಪಡಿಸಿದ್ದು, ಕಾನೂನು ಮತ್ತು ಸಣ್ಣ ನೀರಾವರಿ ಸಚಿವ ಟಿ.ಬಿ.ಜಯಚಂದ್ರ ಉದ್ಘಾಟನೆ ಮಾಡಲಿದ್ದಾರೆ. ಸಂಸದ ಬಿ.ಎನ್.ಚಂದ್ರಪ್ಪ, ಜಿಪಂ ಅಧ್ಯಕ್ಷೆ ಲತಾ ಕೆ.ರವಿಕುಮಾರ್, ಮಾಜಿ ಸಚಿವ ಬಿ.ಸತ್ಯನಾರಾಯಣ, ರಾಜ್ಯ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಚಿದಾನಂದ ಎಂ.ಗೌಡ, ಮಾಜಿ ಸಂಸದ ಸಿ.ಪಿ.ಮೂಡಲಗಿರಿಯಪ್ಪ, ಬಿಜೆಪಿ ಮುಖಂಡ ಎಸ್.ಆರ್.ಗೌಡ, ಜಿಪಂ ಸದಸ್ಯ ಎಸ್.ರಾಮಕೃಷ್ಣ ಪಾಲ್ಗೊಳ್ಳಲಿದ್ದಾರೆ. ತಾಲೂಕಿನ ಸುತ್ತ ಮುತ್ತಲ ಕಲಾಭಿಮಾನಿಗಳು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ರಂಗಸಜ್ಜಿಕೆಯ ನಿರ್ವಾಹಕ ದ್ವಾರನಕುಂಟೆ ಲಕ್ಷ್ಮಣ್ ತಿಳಿಸಿದಾರೆ.

## ಶಾಸಕ ಕೆ.ಎಸ್.ಪುಟ್ಟಣ್ಣಯ್ಯರಿಂದ ಚಾಲನೆ

# ದನಗಳ ಜಾತ್ರಾ ಮಹೋತ್ಸವ ಇಂದಿನಿಂದ

**ವಿಶ್ವವಾಣಿ ಸುದ್ದಿಮನೆ** ಪಾಂಡವಪುರ

ಬೇಬಿ ಬೆಟ್ಟದ ಭಾರಿ ದನಗಳ ಜಾತ್ರಾ ಮಹೋತ್ಸವವು ಇಂದಿನಿಂದ 22ರವರೆಗೆ 10ದಿನ ಬಹಳ ಸಡಗರ, ಸಂಭ್ರಮದಿಂದ ನಡೆಯಲಿದೆ.

ಜಾತ್ರೆಗೆ ಆಗಮಿಸುವ ಜನ–ಜಾನುವಾರುಗಳಿಗೆ ಕುಡಿಯುವ ನೀರು, ವಿದ್ಯುತ್‌ಚ್ಛಕ್ತಿ, ಮೇವು, ಉಚಿತ ಚಿಕಿತ್ಸಾ ವ್ಯವಸ್ಥೆ ಮಾಡಲಾಗಿದೆ. ಜತೆಗೆ ಜಾತ್ರೆಯಲ್ಲಿ ಭಾಗವಹಿಸುವ ಜಾನುವಾರುಗಳು, ಅಂಗಡಿಗಳಿಗೆ ಸಂಪೂರ್ಣ ಸುಂಕ ವಿನಾಯಿತಿ ನೀಡಲಾಗಿದೆ.

18ರಂದು ಬೆಳಗ್ಗೆ 10ಗಂಟೆಗೆ ಉಚಿತ ಸಾಮೂಹಿಕ ಸರಳ ಸಾಮೂಹಿಕ ವಿವಾಹ ಕಾರ್ಯಕ್ರಮ ಆಯೋಜಿಸಲಾಗಿದ್ದು, ನೂರಾರು ಜೋಡಿಗಳು ದಾಂಪತ್ಯ ಜೀವನಕ್ಕೆ ಕಾಲಿರಿಸಲಿವೆ. 22ರಂದು ಜಾತ್ರೆಯಲ್ಲಿ ಭಾಗವಹಿಸಿದ ಉತ್ತಮ ರಾಸುಗಳಿಗೆ ಬಹುಮಾನ ನೀಡಲಾಗುವುದು. ಇದರ ಜತೆಗೆ ವಿವಿಧ ಇಲಾಖೆಗಳಿಂದ ವಸ್ತು ಪ್ರದರ್ಶನ ಏರ್ಪಡಿಸಲಾಗಿದೆ.

ಶಾಸಕರಿಂದ ಜಾತ್ರೆಗೆ ವಿದ್ಯುಕ್ತ ಚಾಲನೆ : ಸುಮಾರು 10ದಿನ ನಡೆಯಲಿರುವ ಜಾತ್ರಾ ಮಹೋತ್ಸವಕ್ಕೆ ಇಂದು ಬೆಳಗ್ಗೆ 11 ಗಂಟೆಗೆ ಕೆ.ಎಸ್.ಪುಟ್ಟಣ್ಣಯ್ಯ ವಿದ್ಯುಕ್ತ ಚಾಲನೆ ನೀಡುವರು. ಸಂಜೆ 7ಗಂಟೆಗೆ ಕ್ಯಾತನಹಳ್ಳಿ ಕಲಾವಿದರಿಂದ 'ಬದಲಾಗದವರು ನಾಟಕ ಪ್ರದರ್ಶನ ನಡೆಯಲಿದೆ.

ನಾಳೆ ಸಂಜೆ 7 ಗಂಟೆಗೆ ಸ್ಟೆಪ್ ಆಫ್ ದಿ ಡ್ಯಾನ್ಸ್‌ನ ಮುರಳಿ ಮತ್ತು ತಂಡದವರಿಂದ 'ಡ್ಯಾನ್ಸ್ ಡ್ಯಾನ್ಸ್ ಕಾರ್ಯಕ್ರಮ,15ರಂದು ಸಂಜೆ 7 ಗಂಟೆಗೆ ಗ್ರಾಮರಂಗ ಸಾಂಸ್ಕೃತಿಕ ವೇದಿಕೆಯ ಬಿ.ಎಸ್.ನಾಗಲಿಂಗೇಗೌಡ, ತಂಡದವರಿಂದ 'ಗೀತಾ ಗಾಯನ ಕಾರ್ಯಕ್ರಮ, 16ರಂದು ಸಂಜೆ 7 ಗಂಟೆಗೆ ಕಲಾನಿಧಿ ಸ್ಕೂಲ್ ಆಫ್ ಡ್ಯಾನ್ಸ್ ಗುರು ಪದ್ಮಶ್ರೀ ಶಿಷ್ಯ ವೃಂದದವರಿಂದ 'ಭರತನಾಟ್ಯ ನಡೆಯಲಿದೆ.

17ರಂದು ಮಧ್ಯಾಹ್ನ 2 ಗಂಟೆಗೆ ವಾಲಿಬಾಲ್ ಪಂದ್ಯಾವಳಿ ನಡೆಯಲಿದ್ದು, ಸಂಜೆ 7 ಗಂಟೆಗೆ ಹಳೇಬೀಡು ಕುಳ್ಳೆಗೌಡ , ತಂಡದವರಿಂದ 'ರಂಗಗೀತೆ ಕಾರ್ಯಕ್ರಮ, 18ರಂದು ಬೆಳಗ್ಗೆ 10 ಗಂಟೆಗೆ ಉಚಿತ ಸಾಮೂಹಿಕ ವಿವಾಹ ನಡೆಯಲಿದ್ದು, ಸಂಜೆ 7 ಗಂಟೆಗೆ ಶಿವಾರಗುಡ್ಡ ಉಮೇಶ್, ತಂಡದವರಿಂದ 'ಸುಗಮ ಸಂಗೀತ ಹಾಗೂ 'ಹಾಸ್ಯ ಕಾರ್ಯಕ್ರಮ ನಡೆಯಲಿದೆ.

19ರಂದು ಮಧ್ಯಾಹ್ನ 2 ಗಂಟೆಗೆ 'ಕುಸ್ತಿ ಪಂದ್ಯಾವಳಿ ನಡೆಯಲಿದ್ದು, ಸಂಜೆ 7 ಗಂಟೆಗೆ ಎಬಿಸಿಡಿ ಡ್ಯಾನ್ಸ್ ಕ್ಲಾಸ್‌ನ ಆಕಾಶ್ ತಂಡದಿಂದ 'ಡ್ಯಾನ್ಸ್ ಡ್ಯಾನ್ಸ್ ಕಾರ್ಯಕ್ರಮ, 20ರಂದು ಮಧ್ಯಾಹ್ನ 2 ಗಂಟೆಗೆ ಉತ್ತಮ ರಾಸುಗಳ ಆಯ್ಕೆ ನಡೆಯಲಿದೆ. 21ರಂದು ಬೆಳಗ್ಗೆ 9 ಗಂಟೆಗೆ ಶ್ರೀ ಮಹದೇಶ್ವರಸ್ವಾಮಿ , ಶ್ರೀ ಸಿದ್ದಲಿಂಗೇಶ್ವರ ಸ್ವಾಮಿ ರಥೋತ್ಸವ ನಡೆಯಲಿದ್ದು, 22ರಂದು ಮಧ್ಯಾಹ್ನ 2 ಗಂಟೆಗೆ ಉತ್ತಮ ರಾಸುಗಳಿಗೆ ಬಹುಮಾನ ವಿತರಣೆ ಮಾಡಲಾಗುವುದು ಎಂದು ಬೇಬಿ ಬೆಟ್ಟದ ಜಾತ್ರಾ ಸಲಹಾ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

# ಸಾಂಸ್ಕೃತಿಕ ಭವನಕ್ಕೆ ಭೂಮಿಪೂಜೆ

**ತಿಪಟೂರು:** ನಗರದ ಸರಕಾರಿ ಬಾಲಕಿಯರ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನೂತನ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ 4.95 ಲಕ್ಷ ರು.ಬಿಡುಗಡೆಯಾಗಿದ್ದು ಭೂಮಿಪೂಜೆಯನ್ನು ಶಾಸಕ ಕೆ.ಷಡಕ್ಷರಿ ನೆರವೇರಿಸಿದರು. ತಾಪಂ.ಅಧ್ಯಕ್ಷ ಎನ್.ಎಂ.ಸುರೇಶ್, ಉಪಾಧ್ಯಕ್ಷ ಎನ್.ಶಂಕರ್, ಪ್ರಾಂಶುಪಾಲ ನಾಗೇಂದ್ರಪ್ಪ, ಉಪಪ್ರಚಾರ್ಯ ಸಿದ್ದರಾಜಯ್ಯ, ಉಪನ್ಯಾಸಕ ಗೋಪಾಲನಹಳ್ಳಿ ರಘು, ಸಹ ಶಿಕ್ಷಕ ಸುರೇಶ್, ಕುಮಾರ್, ಗುತ್ತಿಗೆದಾರ ಶ್ರೀನಿವಾಸ್, ವಿದ್ಯಾರ್ಥಿಗಳು ಇದ್ದರು.



ನೂತನ ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಭೂಮಿಪೂಜೆಯನ್ನು ಶಾಸಕ ಕೆ.ಷಡಕ್ಷರಿ ನೆರವೇರಿಸಿದರು.

# ವಿದ್ಯಾರ್ಥಿಯ ಕಣ್ಣಿಗೆ ಕಲ್ಲು ತಗಲಿ ದೃಷ್ಟಿಗೆ ತೊಂದರೆ

**ಭಾರತೀನಗರ:** ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯಲ್ಲಿ ಸ್ನೇಹಿತರು ಆಟವಾಡುತ್ತಿದ್ದಾಗ ವಿದ್ಯಾರ್ಥಿಯ ಕಣ್ಣಿಗೆ ಕಲ್ಲು ತಗಲಿ ಆತ ಕಣ್ಣು ಕಳೆದುಕೊಂಡಿದ್ದಾನೆ. ಎನ್.ಎಸ್.ಪವನ್ ಕುಮಾರ್(11) ಕಣ್ಣು ಕಳೆದುಕೊಂಡ ವಿದ್ಯಾರ್ಥಿ.

ನಮ್ಮ ಮಗ ಪವನ್‌ಕುಮಾರ್ ಕಣ್ಣು ಕಳೆದುಕೊಳ್ಳಲು ಭಾರತೀನಗರದಲ್ಲಿರುವ ಡಾ.ಬಿ.ಆರ್,ಅಂಬೇಡ್ಕರ್ ವಸತಿ ನಿಲಯದ ಸಿಬ್ಬಂದಿ ಕಾರಣ ಎಂದು ತಂದೆ ಶಂಕರ್ ಭಾರತೀನಗರದ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

ಭಾರತೀನಗರದ ಡಾ.ಬಿ.ಆರ್.ಅಂಬೇಡ್ಕರ್ ವಸತಿ ಶಾಲೆಯ 6 ನೇ ತರಗತಿ ವ್ಯಾಸಂಗ ಮಾಡುತ್ತಿರುವ ನನ್ನ ಮಗ ಪವನ್ ಕುಮಾರ್ ಡಿ. 30 ರಂದು ಸಂಜೆ ವಸತಿ ನಿಲಯದ ಶಾಲಾ ಆವರಣದಲ್ಲಿ ಓದುತ್ತಿದ್ದಾಗ, ಆಟದ ಮೈದಾನದಲ್ಲಿ ವಿದ್ಯಾರ್ಥಿಗಳು ಕಲ್ಲಿನಲ್ಲಿ ಆಟವಾಡುತ್ತಿದ್ದ ಸಂದರ್ಭದಲ್ಲಿ ಕಲ್ಲು ಆಕಸ್ಮಿಕವಾಗಿ ಬಂದು ನಮ್ಮ ಮಗನ ಎಡಗಣ್ಣಿಗೆ ಬಂದು ಬಿದ್ದ ಪರಿಣಾಮ ತೀವ್ರ ಗಾಯಗೊಂಡು ದೃಷ್ಟಿ ಕಳೆದುಕೊಂಡಿದ್ದಾನೆ. ಇದಕ್ಕೆ ವಸತಿ ನಿಲಯದ ಸಿಬ್ಬಂದಿಗಳ ನಿರ್ಲಕ್ಷ್ಯ ಮನೋಭಾವವೇ ಕಾರಣ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಗಾಯಗೊಂಡ ಪವನ್‌ಕುಮಾರ್‌ಗೆ ಶೀಘ್ರವಾಗಿ ಸೂಕ್ತ ಚಿಕಿತ್ಸೆ ಕೊಡಿಸಿದ್ದರೆ ಅವರ ದೃಷ್ಟಿಗೆ ಯಾವುದೆ ಸಮಸ್ಯೆಯಾಗುತ್ತಿರಲಿಲ್ಲ. ನಂತರ ನಾನು ಹೋಗಿ ಹಲವು ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದರೆ ಯಾವುದೆ ಪ್ರಯೋಜನವಾಗಿಲ್ಲ ಎಂದು ತಿಳಿಸಿದ್ದಾರೆ.

ನನಗೆ ಗಾಯಗೊಂಡ ಸಂದರ್ಭದಲ್ಲಿ ವಸತಿನಿಲಯದ ಸಿಬ್ಬಂದಿ ಸೂಕ್ತ ಚಿಕಿತ್ಸೆ ಕೊಡಿಸಿದ್ದರೆ ನನ್ನ ಕಣ್ಣಿಗೆ ಯಾವುದೇ ತೊಂದರೆಯಾಗುತ್ತಿರಲಿಲ್ಲ ಜತೆಗೆ ಈ ವಿಷಯವನ್ನು ನಮ್ಮ ತಂದೆಗೆ ತಡವಾಗಿ ತಿಳಿಸಿದ್ದಾರೆ. ಆಟವಾಡಲು ಕ್ರೀಡಾಸಾಮಾಗ್ರಿಗಳನ್ನು ಕೊಟ್ಟಿದ್ದರೆ ಈ ಘಟನೆ ನಡೆದು ನಮ್ಮ ಕಣ್ಣು ಕಳೆದುಕೊಳ್ಳುವ ಸ್ಥಿತಿ ಬರುತ್ತಿರಲಿಲ್ಲ ಎಂದು ವಿದ್ಯಾರ್ಥಿ ಪವನ್‌ಕುಮಾರ್ ವಿಷಾದ ವ್ಯಕ್ತಪಡಿಸಿದರು.

# ಬೂತ್‌ಮಟ್ಟದ ತರಬೇತಿ ಕಾರ್ಯಗಾರ ಇಂದು

**ವಿಶ್ವವಾಣಿ ಸುದ್ದಿಮನೆ** ಕೊರಟಗೆರೆ



ಪತ್ರಿಕಾಗೋಷ್ಟಿಯಲ್ಲಿ ಕೆಪಿಸಿಸಿ ಕಾರ್ಯದರ್ಶಿ ಅನಿಲ್‌ಕುಮಾರ್ ಪಾಟೀಲ, ಜಿಪಂ ಸದಸ್ಯ ನಾರಾಯಣ್‌ಮೂರ್ತಿ ಇತರರು ಇದ್ದರು.

ಕೊರಟಗೆರೆ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಧ್ಯಕ್ಷರು, ಬೂತ್‌ಮಟ್ಟದ ಏಜೆಂಟರುಗಳ ತರಬೇತಿ ಕಾರ್ಯಗಾರವನ್ನು ಫೆ.14ರಂದು ಬೆಳಗ್ಗೆ 10 ಗಂಟೆಗೆ ಮಾರುತಿ ಕಲ್ಯಾಣ ಮಂಟಪದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೊರಟಗೆರೆ ವಿಧಾನ ಸಭಾ ಕ್ಷೇತ್ರದ ಕಾಂಗ್ರೆಸ್ ಉಸ್ತುವಾರಿ ಅನಿಲ್ ಕುಮಾರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕಾಂಗ್ರೆಸ್ ದಿಂದ ಏರ್ಪಡಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ,

ವಿಧಾನಸಭಾ ಕ್ಷೇತ್ರದಲ್ಲಿ ಈಗಾಗಲೇ ಸುಮಾರು 5000ಕ್ಕೂ ಹೆಚ್ಚು ಬೂತ್ ಕಮಿಟಿಯ ಸದಸ್ಯರು ಕಾರ್ಯಪ್ರವೃತರಾಗಿದ್ದಾರೆ. ಅಧ್ಯಕ್ಷರು ಮತ್ತು ಏಜೆಂಟರ್‌ಗಳು ಬೂತ್ ಮಟ್ಟದಲ್ಲಿ ಯಾವ ರೀತಿ ಕೆಲಸ ಮಾಡಬೇಕು ಎಂಬ ತಿಳುವಳಿಕೆ ನೀಡುವ ತರಬೇತಿ ಕಾರ್ಯಗಾರವನ್ನು ಆಯೋಜಿಸಲಾಗಿದೆ. ಪ್ರಮುಖವಾಗಿ ಬೂತ್ ಏಜೆಂಟರ್‌ಗಳ ಹಾಗೂ ಅಧ್ಯಕ್ಷರುಗಳ ಪಾತ್ರವೇನು ಅವರು ಚುನಾವಣೆಗೆ ಯಾವ ರೀತಿ ಸಿದ್ದತೆಗಳನ್ನು ಮಾಡಿಕೊಳ್ಳಬೇಕು ಎಂಬ ಸಂಪೂರ್ಣ ಮಾಹಿತಿ ನೀಡದರು.

ಜತೆಗೆ ಮೊದಲಿದ್ದ 236 ಬೂತ್‌ಗಳಿದ್ದವು ಈಗ 237ಬೂತ್‌ಗಳಾಗಿವೆ ಈ ಹೊಸ ಬೂತ್ ಕಮಿಟಿಯ ಪ್ರಕಾರವೇ ತರಬೇತಿಯನ್ನು ನೀಡಿ ಗುರುತಿನ ಚೀಟಿಗಳನ್ನು ಸಹ ಆ ದಿನ ವಿತರಿಸಲಾಗುವುದು. ಈ ತರಬೇತಿಯಲ್ಲಿ ಅಧ್ಯಕ್ಷರು ಹಾಗೂ ಬಿಎಲ್‌ಎಗಳಿಗೆ ವರೆತುಪಡಿಸಿ ಉಳಿದವರಿಗೆ ಪ್ರವೇಶವಿಲ್ಲ ಎಂದರು.

ತರಬೇತಿ ಕಾರ್ಯಗಾರದ ಉದ್ಘಾಟನೆಯನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಡಾ. ಜಿ. ಪರಮೇಶ್ವರ್ ವಹಿಸಲಿದ್ದು, ನಗರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಮಚಂದ್ರಯ್ಯ, ಗ್ರಾಮಾಂತರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಜಯಶಂಕರ, ರಾಜ್ಯ, ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಪಕ್ಷದ ಮುಖಂಡರು ಅತಿಥಿಗಳಾಗಿ ಆಗಮಿಸುವರು.

ಜಿಪಂ ಸದಸ್ಯ ನಾರಾಯಣ್‌ಮೂರ್ತಿ, ಕೆಪಿಸಿಸಿ ರಾಜ್ಯ ಎಸ್‌ಟಿ ಘಟಕದ ಕಾರ್ಯದರ್ಶಿ ನಾಗರಾಜು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಮಚಂದ್ರಯ್ಯ, ಯುತ್‌ಕಾಂಗ್ರೆಸ್ ಅಧ್ಯಕ್ಷ ವಿನಯ್‌ಕುಮಾರ್, ಜಿಲ್ಲಾ ಓಬಿಸಿ ಅಧ್ಯಕ್ಷ ಪುಟ್ಟರಾಜು, ಗ್ರಾಪಂ ಅಧ್ಯಕ್ಷ ನಂದೀಶ್, ಎನ್ಐಸಿಯು ಅಧ್ಯಕ್ಷ ಬಾಬು, ಮುಖಂಡರಾದ ಅರಕೆರೆಶಂಕರ್, ಅಶ್ವತ್ಥನಾರಾಯಣ್, ವೀರಣ್ಣಗೌಡ, ಅಬ್ದುಲ್‌ಬಷೀರ್, ಅಮರ್, ಡೈರಿ ಸುರೇಶ್, ಬೈರೇಶ್, ಚಂದ್ರಶೇಖರ್, ಹರ್ಷಿತ್ ಇದ್ದರು.

# ಸಭೆ: ಬ್ರಹ್ಮರಥ ನಿರ್ಮಾಣಕ್ಕೆ ತೀರ್ಮಾನ

**ಬಂಟ್ವಾಳ:** ಪುರಾತನ ದೇವಾಲಯಗಳಲ್ಲೊಂದಾದ ಬಂಟ್ವಾಳ ತಾಲೂಕಿನ ನಾವೂರು ಗ್ರಾಮದ ಅಗ್ರಹಾರ ಬೀದಿ ಶ್ರೀ ಗೋಪಾಲಕೃಷ್ಣ ದೇವರಿಗೆ ಬ್ರಹ್ಮರಥ ನಿರ್ಮಾಣಕ್ಕೆ ದೇವಳದ ವಠಾರದಲ್ಲಿ ನಡೆದ ಸಮಾಲೋಚನಾ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ದ. ಕ. ಜಿಲ್ಲಾ ಉಸ್ತುವಾರಿ ಸಚಿವ ಬಿ. ರಮಾನಾಥ ರೈ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ದೇವಳದ ಮುಂಭಾಗ ಸ್ವಾಗತಗೋಪುರ, ಅನ್ನಛತ್ರ, ಹಾಗೂ ದ್ವಾರ ನಿರ್ಮಾಣಕ್ಕೂ ನಿರ್ಧರಿಸಲಾಗಿದೆ. ಒಂದು ಕೋಟಿ ರು. ವೆಚ್ಚದಲ್ಲಿ ಈ ಎಲ್ಲ ಕಾರ್ಯವನ್ನು ಅನುಷ್ಠಾನಕ್ಕೆ ತರಲು ಉದ್ದೇಶಿಸಲಾಗಿದ್ದು, ಇದಕ್ಕಾಗಿ ಉದ್ಯಮಿ ರಘುನಾಥ ಸೋಮಯಾಜಿ ಅವರ ಗೌರವಾಧ್ಯಕ್ಷತೆ, ಜಿಪಂ ಸದಸ್ಯ ಪದ್ಮಶೇಖರ ಜೈನ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಸಭೆಯಲ್ಲಿ ಊರ, ಪರವೂರಿನಿಂದ ದಾನಿಗಳ, ದೇವಳದ ಭಕ್ತರಿಂದ ದೇಣಿಗೆ ಯಾಚಿಸಲು ತೀರ್ಮಾನಿಸಲಾಯಿತು.

ಮನವಿ ಸ್ವೀಕರಿಸಿ ಮಾತನಾಡಿದ ಸಚಿವ ರಮಾನಾಥ ರೈ, ರಥದ ನಿರ್ಮಾಣ ಸಹಿತ ದೇವಳದ ಅಭಿವೃದ್ಧಿ ಕಾರ್ಯಕ್ಕೆ ಸಂಪೂರ್ಣ ಸಹಕಾರ ನೀಡುವ ಭರವಸೆ ನೀಡಿದರು.

ಉದ್ಯಮಿ ರಘುನಾಥ ಸೋಮಯಾಜಿ, ಸೇಸಪ್ಪ ಕೋಟ್ಯಾನ್ ಪಚ್ಚಿನಡ್ಕ, ಮಣ್ಣಗುಡ್ಡೆ ಗುರ್ಜಿ ಸಮಿತಿ ಅಧ್ಯಕ್ಷ ವಾಸುದೇವ ರಾವ್, ಉಮಾ. ಎಸ್. ರಾವ್, ಅಣಿಜ ವರದ ಪೂಜಾರಿ, ಜಗದೀಶ್ ಪೂಜಾರಿ, ರಾಮಚಂದ್ರಗೌಡ ಮಣಿ, ಪದ್ಮಶೇಖರ ಜೈನ್ ಬೀದಿ, ವಿಶಾಂತ್ ಶೆಟ್ಟಿಕುಕ್ಕಿಲ ಸಭೆಯಲ್ಲಿ ಸಲಹೆ ಸೂಚನೆ ನೀಡಿದರು.




ಸಚಿವ ಬಿ. ರಮಾನಾಥ ರೈ ಅಧ್ಯಕ್ಷತೆಯಲ್ಲಿ ದೇವಳದ ಸಭೆ ನಡೆಯಿತು.

# ಭಾವದೀಪ ಗಾಯನ ಶಿಬಿರ 15 ರಂದು

**ಮಧುಗಿರಿ:** ಭಾವದೀಪ ಉಚಿತ ಗಾಯನ ಶಿಬಿರ ಸ್ವರಸಿಂಚನ ಸುಗಮಸಂಗೀತ, ಜನಪದ ಕಲಾ ಸಂಸ್ಥೆ, ತುಮಕೂರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು ಇವರುಗಳ ಸಹಯೋಗದಲ್ಲಿ ಮಧುಗಿರಿಯ ಮಹಿಳಾ ಸಮಾಜ ಸಭಾಂಗಣದಲ್ಲಿ ಭಾವದೀಪ ಗಾಯನ ಶಿಬಿರ ಫೆ. 15 ರಂದು ನಡೆಯಲಿದೆ. ಖ್ಯಾತ ಹಿಂದೂಸ್ತಾನಿ ಸಂಗೀತ ಹಾಗೂ ಸುಗಮ ಸಂಗೀತ ಗಾಯಕಿ ದೀಪಿಕಾ ಶ್ರೀಕಾಂತ್ ಶಿವಮೊಗ್ಗ ಮತ್ತು ತಂಡದವರು ಗಾಯನ ತರಬೇತಿ ನೀಡಲಿದ್ದಾರೆ.

ಒಂದು ದಿನದ ಉಚಿತ ತರಬೇತಿ ಕಾರ್ಯಗಾರದಲ್ಲಿ ಭಾಗವಹಿಸುವ ಸಂಗೀತಾಸಕ್ತರು ತಮ್ಮ ಹೆಸರುಗಳನ್ನು ಮಲ್ಲಿಕಾರ್ಜುನ ಕೆಂಕೆರೆ,ದೂ.9845742040 ರಲ್ಲಿ ಸಂಪರ್ಕಿಸಲು ಪ್ರಕಟನೆಯಲ್ಲಿ ತಿಳಿಸಿದಾರೆ.

# ಕೊರಟಗೆರೆ ವಿಧಾನ ಸಭಾ ಕ್ಷೇತ್ರದ ಚುನಾವಣೆಗೆ ಯುವಕರ ನೇತೃತ್ವ

**ವಿಶ್ವವಾಣಿ ಸುದ್ದಿಮನೆ** ಕೊರಟಗೆರೆ



ಜೆಡಿಎಸ್ ಸೇರ್ಪಡೆ ಕಾರ್ಯಕ್ರಮದಲ್ಲಿ ಶಾಸಕ ಪಿ.ಆರ್.ಸುಧಾಕರಲಾಲ್ ಸೇರಿದಂತೆ ಇತರರು ಇದ್ದರು.

ನಾಡಿನ ಯುವಕರ ಶಕ್ತಿಯೇ ಕರ್ನಾಟಕದ ಪ್ರಾದೇಶಿಕ ಪಕ್ಷ ಜೆಡಿಎಸ್‌ನ ಆಸ್ತಿ. ಪಟ್ಟಣದ 250ಕ್ಕೂ ಹೆಚ್ಚು ಯುವಕರ ಸೇರ್ಪಡೆಯಿಂದ ಜೆಡಿಎಸ್ ಕೊರಟಗೆರೆಯಲ್ಲಿ ಸುಭದ್ರಕೋಟೆಯಾಗಿದೆ ಎಂಬುವುದು ಮತ್ತೊಮ್ಮೆ ನಿರೂಪಿಸಿದೆ ಎಂದು ಶಾಸಕ ಪಿ.ಆರ್.ಸುಧಾಕರಲಾಲ್ ಸಂತೋಷ ವ್ಯಕ್ತಪಡಿಸಿದರು.

ಪಟ್ಟಣದ 5ನೇ ವಾರ್ಡಿನ ಗಿರಿನಗರದಲ್ಲಿ ಜೆಡಿಎಸ್ ವತಿಯಿಂದ ಏರ್ಪಡಿಸಲಾಗಿದ್ದ ಜೆಡಿಎಸ್ ಯುವಕರ ಸೇರ್ಪಡೆ ಕಾರ್ಯಕ್ರಮದಲ್ಲಿ ಮಾತನಾಡಿ, ಕೊರಟಗೆರೆ ವಿಧಾನಸಭಾ ಕ್ಷೇತ್ರದಲ್ಲಿ ಅತಿ ಹೆಚ್ಚಿನ ಯುವಕರು ಕುಮಾರಣ್ಣನ ಪರವಾಗಿ ಕೆಲಸ ಮಾಡುತ್ತಿದ್ದಾರೆ. ಪಟ್ಟಣದಲ್ಲಿ ಇಂದು 250ಕ್ಕೂ ಹೆಚ್ಚು ಯುವಕರ ಸೇರ್ಪಡೆಯಿಂದ ಜೆಡಿಎಸ್ ಪಕ್ಷಕ್ಕೆ ಕೊರಟಗೆರೆಯಲ್ಲಿ ಆನೆಬಲ ಬಂದಂತೆ ಆಗಿದೆ. ಮುಂದಿನ ದಿನಗಳಲ್ಲಿ ಜೆಡಿಎಸ್‌ನ ಯುವ ನಾಯಕರಾದ ಪ್ರಜ್ವಲ್ ರೇವಣ್ಣ ಮತ್ತು ನಿಖಿಲ್‌ಗೌಡರನ್ನು ಕ್ಷೇತ್ರಕ್ಕೆ ಕರೆಯಿಸಿ ಯುವ ಸಮಾವೇಶ ಮಾಡಲಾಗುವುದು ಎಂದು ಹೇಳಿದರು.

ಜಿಲ್ಲಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಮಹಾಲಿಂಗಪ್ಪ ಮಾತನಾಡಿ, ಕೊರಟಗೆರೆ ಪಟ್ಟಣದ 250ಕ್ಕೂ ಹೆಚ್ಚು ಯುವಕರು ಕಾಂಗ್ರೆಸ್ ತೊರೆದು ಕೊರಟಗೆರೆಯ ಯುವಕರ ಆಶಾಕಿರಣ ಸುಧಾಕರಲಾಲ್ ನೇತೃತ್ವದಲ್ಲಿ ಜೆಡಿಎಸ್‌ಕ್ಕೆ ಆಗಮಿಸುವ ಮೂಲಕ ಪಕ್ಷಕ್ಕೆ ಇನ್ನಷ್ಟು ಯುವಶಕ್ತಿ ತುಂಬಿದ್ದಾರೆ. ಕ್ಷೇತ್ರದಲ್ಲಿ ಶಾಸಕರ ಗೆಲುವು ಯುವಕರ ಗೆಲುವು ಆಗಿದೆ. ಯುವಕರು ಕ್ಷೇತ್ರದ ಅಭಿವೃದ್ದಿಯ ಬಗ್ಗೆ ಸಾರ್ವಜನಿಕರಿಗೆ ತಿಳಿಸಬೇಕಾಗಿದೆ ಎಂದರು.

ತಾಲೂಕು ಜೆಡಿಎಸ್ ಕಾರ್ಯಧ್ಯಕ್ಷ ನರಸಿಂಹರಾಜು ಮಾತನಾಡಿ, ಪಟ್ಟಣದ ರಮೇಶ್ ಮತ್ತು ಯೂನುಶ್ ನೇತೃತ್ವದ ಯುವಪಡೆ ಶಾಶ್ವತವಾಗಿ ಜೆಡಿಎಸ್ ಪರವಾಗಿ ಕೆಲಸ ಮಾಡುವ ಮೂಲಕ ನಮ್ಮ ಕೊರಟಗೆರೆ ಮನೆ ಮಗ ಸುಧಾಕರಲಾಲ್ ಕೈ ಬಲಪಡಿಸಿ ಕುಮಾರಣ್ಣ ಮುಖ್ಯಮಂತ್ರಿ ಆಗಲು ಸಹಕಾರ ನೀಡಬೇಕು ಎಂದು ಮನವಿ ಮಾಡಿದರು. ಪಟ್ಟಣದ ಜಯಕರ್ನಾಟಕ ಎಸ್‌ಸಿಎಸ್‌ಟಿ ಘಟಕದ ಅಧ್ಯಕ್ಷ ರಮೇಶ್ ಮತ್ತು ಯುವ ಮುಖಂಡ ಯೂನುಷ್ ನೇತೃತ್ವದ ಶಹಬ್, ಜಮೀವುಲ್ಲಾ, ನವಾಜ್, ದೀನೇಶ್, ರಾಮಚಂದ್ರ, ಸಿದ್ದರಾಜು, ಮಂಜುನಾಥ, ಶೇಖರ್, ಗಿರೀಶ್, ರವಿ, ರಮೇಶ್, ಫೈರೋಜ್, ತಿಮ್ಮರಾಜು, ಮೋಹನ್, ನರೇಶ್‌ಬಾಬು, ಮುಬಾರಕ್, ಕೃಷ್ಣ ಸೇರಿದಂತೆ 250ಕ್ಕೂ ಹೆಚ್ಚು ಯುವಕರು ಶಾಸಕ ಪಿ.ಆರ್.ಸುಧಾಕರಲಾಲ್ ನೇತೃತ್ವದಲ್ಲಿ ಜೆಡಿಎಸ್ ಸೇರ್ಪಡೆಯಾದರು.

ಪಪಂ ಸದಸ್ಯ ಗಣೇಶ್, ಜೆಡಿಎಸ್ ತಾಲೂಕು ಕಾರ್ಯದರ್ಶಿ ಲಕ್ಷ್ಮಣ್, ವಕ್ತಾರ ಲಕ್ಷ್ಮೀಶ್, ಮಾನವ ಸಂಪನ್ಮೂಲ ಹಕ್ಕು ಅಧ್ಯಕ್ಷ ತಿಮ್ಮರಾಜು, ಜೆಡಿಎಸ್ ನಗರ ಯುವಧ್ಯಕ್ಷ ಫಾರೂಕ್, ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಕಲೀಂವುಲ್ಲಾ, ಜೆಡಿಎಸ್ ಮುಖಂಡರಾದ ಸೈಯದ್, ಸೈಫುಲ್ಲಾ, ನಾರಾಯಣ್, ಕಾಮರಾಜು, ಸಿದ್ದಮಲ್ಲಪ್ಪ, ಅಭಿಲಾಷ್, ಶಶಿಕುಮಾರ್, ಶರತ್, ಗಿರೀಶ್‌ರಾವ್, ವೆಂಕಟರೆಡ್ಡಿ, ಕಿಶೋರ್ ಇದ್ದರು.



ಕೊರಟಗೆರೆ ತಾಲೂಕಿನ 24 ಗ್ರಾಪಂ ಸಹಯೋಗದಲ್ಲಿ ಆರ್‌ಡಿಪಿಆರ್ ಕ್ರೀಡಾ ಮತ್ತು ಸಾಂಸ್ಕೃತಿಕ ಸಂಘದ ಕ್ರೀಡಾಕೂಟದಲ್ಲಿ ಹೊಳವನಹಳ್ಳಿ ಹೋಬಳಿಯ ಗ್ರಾಪಂಗಳಲ್ಲಿನ ನೌಕರರ ಪುರುಷ ವಿಭಾಗದಲ್ಲಿ ಕ್ರಿಕೆಟ್, ವಾಲಿಬಾಲ್ ಮತ್ತು ಮಹಿಳಾ ಹಾಗೂ ಪುರುಷರ ವಿಭಾಗದ 100ಮೀಟರ್ ಓಟಗಳಲ್ಲಿ ಪ್ರಥಮ ಸ್ಥಾನ ಗಳಿಸಿದರೆ ಕಬ್ಬಡಿ ಹಾಗೂ 200ಮೀಟರ್ ಓಟದಲ್ಲಿ ದ್ವಿತೀಯ ಸ್ಥಾನ ಪಡೆದಿದ್ದಾರೆ. ವಿಜೇತರಿಗೆ ತಾಪಂ ಇಒ ಮೋಹನ್‌ಕುಮಾರ್ ಪ್ರಶಸ್ತಿ ಪ್ರದಾನ ಮಾಡಿದರು.